

# ಮಾಲಿನ್ಯ

## ಮಾಡಿದ್ದುಣ್ಣೋ ಮಾರಾಯ, ಉಳಿವಿಗೆ ಇದೆಯೇ ಉಪಾಯ?

■ ಗುರುರಾಜ್ ಎಸ್. ದಾವಣಗೆರೆ

**ಭೂಮಿ, ಆಕಾಶ, ಸಾಗರ ತಳ ಸೇರಿದಂತೆ ಮನುಷ್ಯನ ಹಸ್ತಕ್ಷೇಪ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಮಾಲಿನ್ಯವೂ ತುಂಬಿಕೊಂಡಿದೆ. ಮನುಷ್ಯ ಸೃಷ್ಟಿಸಿದ ಕಸ, ಪರಿಸರಕ್ಕೆ ವಿಷವಾಗಿ ಪರಿಣಮಿಸಿದೆ. ಸರ್ವವ್ಯಾಪಿ ಮಾಲಿನ್ಯದ ಪರಿಣಾಮವಾಗಿ, ಪರಿಸರ ಮಾತ್ರವಲ್ಲ, ಮನುಷ್ಯ ಹಾಗೂ ವಿವಿಧ ಜೀವಪ್ರಭೇದಗಳ ಜೀವವೂ ಆತಂಕಕ್ಕೆ ಸಿಲುಕಿದೆ. ವಾಮನನ ಹೆಜ್ಜೆಗಳಂತೆ ವಿಶ್ವವನ್ನೆಲ್ಲ ಆವರಿಸಿಕೊಂಡಿರುವ ಮಾಲಿನ್ಯದ ವಿರಾಟ್ ಸ್ವರೂಪದ ಬಗ್ಗೆ ವಿವರಿಸುವ ಈ ಬರಹ, ಅಪಾಯಗಳನ್ನು ತಡೆಗಟ್ಟಲು ಇರುವ ಸಾಧ್ಯತೆಗಳತ್ತಲೂ ಗಮನಸೆಳೆಯುತ್ತಿದೆ. ನಾಳೆಗಳ ಬಗ್ಗೆ ಕಾಳಜಿಯಿರುವ ನಾಗರಿಕರು ಇಂದು ನಿರ್ವಹಿಸಲೇಬೇಕಾದ ಜವಾಬ್ದಾರಿಗಳ ಬಗ್ಗೆ ಗಮನಸೆಳೆಯುವ ಈ ವಿಶೇಷ ಬರಹ, 'ಸುಧಾ ಕಾಳಜಿ'ಯ ಮತ್ತೊಂದು ಹೆಜ್ಜೆ.**